ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ಕೆಲವು ಮಿಲ್ಲುಗಳವರಿಗೆ ಹಣ ಪಾವತಿಯಾಗಿಲ್ಲ ಎಂದು ತಿಳಿಸಿರುತ್ತಾರೆ. ಇದು ಸರಿಯೇ? ಸರಿಯಾದಲ್ಲಿ, ಏಕೆ ಪಾವತಿಯಾಗಿಲ್ಲ ಮತ್ತು ಇದನ್ನು ಎಷ್ಟು ಸಮಯದಲ್ಲಿ ಪಾವತಿ ಮಾಡುತ್ತೀರಿ?

ಶ್ರೀ ದಿನೇಶ್ ಗುಂಡೂರಾವ್: ಅವರು ಕೇಳಿರುವ ಪ್ರಶ್ನೆ ಲೆವಿ ಅಕ್ಕಿಗೆ ಸಂಬಂಧಪಟ್ಟಿರುವುದಾಗಿದೆ. ಈಗ ಅವರು ಕೇಳುತ್ತಿರುವಂಥ ಪ್ರಶ್ನೆಯೇ ಬೇರೆಯಾಗಿದೆ. ಅವರು ಕೇಳಿರುವ ಪ್ರಶ್ನೆಗೆ ನಾವು ಉತ್ತರ ಕೊಟ್ಟಿದ್ದೇವೆ. ಈಗ ಅವರು ಕೇಳಿರುವ ಉಪ ಪ್ರಶ್ನೆಗೆ ನಾನು ಆಮೇಲೆ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಆಯಿತು ಬಿಡಿ.

ಹೊಸ ಬಸ್ಸುಗಳನ್ನು ನೀಡುವುದು

122 (1423); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ

(ಅ) ಬೆಳಗಾವಿ ಜಿಲ್ಲೆ, ರಾಯಭಾಗ, ತಾಲ್ಲೂಕು ಭಾಗದಲ್ಲಿ ಬಸ್ ನಿಲ್ದಾಣಕ್ಕೆ ಕಾಂಪೌಂಡ್ ಹಾಗೂ ಸಿ. ಸಿ. ರಸ್ತೆ ನಿರ್ಮಾಣ ಮಾಡುವ ಬಗ್ಗೆ ಟೆಂಡರ್ ಪ್ರಕ್ರಿಯೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಕಾಮಗಾರಿಯನ್ನು ಪ್ರಾರಂಭ ಮಾಡಲು ಇರುವ ತೊಂದರೆಗಳೇನು;

(ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

(ಈ) ರಾಯಭಾಗ ತಾಲ್ಲೂಕು, ಕೆ.ಎಸ್.ಆರ್.ಟಿ.ಸಿ. ಘಟಕಕ್ಕೆ ಎಷ್ಟು ಹೊಸ ಬಸ್‌ಗಳನ್ನು ನೀಡಲಾಗುವುದು; ಹಾಗಿದ್ದಲ್ಲಿ ಕ್ಷೇತ್ರದಲ್ಲಿ ಸಾರ್ವಜನಿಕರ ಸೇವೆಗಾಗಿ 20 ಹೊಸ ಬಸ್ಸುಗಳನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

(ಅ) ಬಂದಿದೆ.

(ಆ) ರಾಯಬಾಗ ಬಸ್ ನಿಲ್ದಾಣದ ಕಾಮಗಾರಿಗಾಗಿ ಕಾಯ್ದಿರಿಸಿರುವ ` 142.75 ಲಕ್ಷ ವೆಚ್ಚದಲ್ಲಿ ಪ್ರಥಮವಾಗಿ ಬೋರ್‌ವೆಲ್ ಕೊರೆಯಿಸಲಾಗಿದ್ದು, ದಕ್ಷಿಣ ಭಾಗದ ಕಾಂಪೌಂಡ್ ನಿರ್ಮಿಸಲಾಗಿದೆ. ಇನ್ನುಳಿದ ಕಾಮಗಾರಿ ಕೆಲಸ ಪ್ರಗತಿಯಲ್ಲಿರುತ್ತದೆ.

ಆದರೆ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಕಾಂಪೌಂಡ್ / ಗೋಡೆ ನಿರ್ಮಾಣ ಕಾರ್ಯಕ್ಕೆ ರಾಯಭಾಗ ಪಟ್ಟಣದ ಸ್ಥಳೀಯ ಜೆ. ಎಂ. ಎಫ್. ಸಿ. ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಹಿನ್ನೆಲೆಯಲ್ಲಿ ಕಾಂಪೌಂಡ್ ಗೋಡೆಯ ನಿರ್ಮಾಣ ಕೆಲಸ ಸ್ಥಗಿತಗೊಂಡಿರುತ್ತದೆ.

(ಇ) ಮಾನ್ಯ ನ್ಯಾಯಾಲಯದಿಂದ ನೀಡಿರುವ ತಡೆಯಾಜ್ಞೆಯನ್ನು ತೆರವು ಗೊಳಿಸಲು ಕ್ರಮ ಜರುಗಿಸಲಾಗಿದ್ದು, ಕೂಡಲೇ ರಾಯಭಾಗ ಬಸ್ ನಿಲ್ದಾಣಕ್ಕೆ ಕಾಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

(ಈ) 2014–15 ನೇ ಸಾಲಿನ ಕಾರ್ಯ ಯೋಜನೆಯಲ್ಲಿ ರಾಯಬಾಗ ಘಟಕಕ್ಕೆ 20 ಹೊಸ ಬಸ್ಸುಗಳನ್ನು ನೀಡಲು ಯೋಜಿಸಲಾಗಿದೆ. ಈಗಾಗಲೇ ಮೇ–2014ರ ಮಾಹೆಯಲ್ಲಿ ಸದರಿ ಘಟಕಕ್ಕೆ 2 ಹೊಸ ವಾಹನಗಳನ್ನು ನೀಡಲಾಗಿದೆ. ಉಳಿದ ವಾಹನಗಳನ್ನು ಯೋಜನೆಯನ್ವಯ ಹಂತ ಹಂತವಾಗಿ ನೀಡಲಾಗುವುದು.

ಶ್ರೀ ರಾಜೀವ್ ಪಿ (ಶ್ರೀ ಐಹೊಳೆ ಡಿ. ಮಹಾಲಿಂಗಪ್ಪನವರ ಪರವಾಗಿ) : ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕೋರ್ಟ್ ಸ್ಟೇ ವೆಕೇಟ್ ಮಾಡಲಿಕ್ಕೆ ನಿಮ್ಮ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ತಾವು ಕೊಡಬೇಕು ಎನ್ನುವ ಮನವಿಯನ್ನು ಮಾಡಿಕೊಳ್ಳುತ್ತೇನೆ. ರಾಯಭಾಗ ಘಟಕಕ್ಕೆ 20 ಬಸ್ಸುಗಳನ್ನು ಕೇಳಿದರೆ ತಾವು ಕೇವಲ ಬಸ್ಸುಗಳನ್ನು ಕೊಡುವ ವಿಚಾರವನ್ನು ಹೇಳುತ್ತಿದ್ದೀರಿ. ಇನ್ನೂ 18 ಬಸ್ಸುಗಳನ್ನು ಅಂದರೆ ಒಟ್ಟು 20 ಬಸ್ಸುಗಳನ್ನು ಕೊಡಬೇಕು ಎಂದು ಮನವಿ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಬಸ್ ಸ್ಟ್ಯಾಂಡ್ ಕಟ್ಟುವುದಕ್ಕೆ ಕೆಲಸ ಪ್ರಾರಂಭ ಮಾಡಿದ ಮೇಲೆ ಅಲ್ಲಿ ಯಾರೋ ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಕಾಂಕ್ರೀಟಿಂಗ್, ಬೋರ್‌ವೆಲ್ ಹೀಗೆ ಬೇರೆ ಕೆಲಸಗಳು ಅಲ್ಲಿ ನಡೆಯುತ್ತಿವೆ. ಎರಡು ಭಾಗದಲ್ಲಿ ಮಾತ್ರ ಕೋರ್ಟನಲ್ಲಿ ಸ್ಟೇ ಇದೆ ಎಂದು ಅದನ್ನು ಪೆಂಡಿಂಗ್ ಇಟ್ಟಿದ್ದೇವೆ. ನಮ್ಮ ವಕೀಲರೂ ಕೂಡ ಅದನ್ನು pursue ಮಾಡಿ, ಬೇಗ stay vacate ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇನ್ನು ಬಸ್ಸುಗಳ ವಿಚಾರವನ್ನು ಹೇಳಬೇಕೆಂದರೆ, ಈಗ ತಕ್ಷಣಕ್ಕೆ ಎರಡು ಬಸ್ಸುಗಳನ್ನು ಕೊಟ್ಟಿದ್ದೇವೆ. ನರ್ಮ ಸ್ಕೀಂನಲ್ಲಿ ಬಸ್ಸುಗಳು ಬರುತ್ತವೆ, ಆಗ ಅವರಿಗೆ ಅವರು ಕೇಳಿದಷ್ಟು ಕೊಡೋಣ.

ಅಧ್ಯಕ್ಷರು; ಆಯಿತು.

ಆರೋಗ್ಯ ಸಮುದಾಯ ಕೇಂದ್ರದ ಕಟ್ಟಡ

123 (404); ಶ್ರೀ ಯಾವಗಲ್ ಬಿ. ಆರ್. (ನರಗುಂದ)

(ಅ) ನರಗುಂದದಲ್ಲಿ ನಿರ್ಮಾಣವಾಗುತ್ತಿರುವ ಆರೋಗ್ಯ ಸಮುದಾಯ ಕೇಂದ್ರದ ಕಟ್ಟಡದ ಕಾಮಗಾರಿ ಯಾವ ಹಂತದಲ್ಲಿದೆ.

(ಆ) ಈ ಕಾಮಗಾರಿಗೆ ಖರ್ಚಾಗುವ ಮೊತ್ತವೆಷ್ಟು; ಹಾಗೂ ಯಾವಾಗ ಕಾಮ ಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ನರಗುಂದದಲ್ಲಿ ನಿರ್ಮಾಣವಾಗುತ್ತಿರುವ 100 ಹಾಸಿಗೆಗಳ ತಾಲ್ಲೂಕು ಮಟ್ಟದ ಆಸ್ಪತ್ರೆ ಕಟ್ಟಡದ ನೆಲಮಹಡಿ ಹಾಗೂ ಮೊದಲನೇ ಮಹಡಿಗೆ ಆರ್. ಸಿ. ಸಿ. ಛಾವಣಿ ಹಾಕಲಾಗಿದೆ. ನೆಲಮಹಡಿಯ ನೆಲಹಾಸು, ಗೋಡೆಗೆ ಟೈಲ್ಸ್ ಹಾಕುವುದು ಮತ್ತು ಪ್ಲಂಬಿಂಗ್ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಮೊದಲನೆಯ ಮಹಡಿಯ ಗಿಲಾವ ಕೆಲಸ ಪ್ರಗತಿ ಯಲ್ಲಿದೆ.